ಉದುರುತ್ತಿದ್ದ ಮಳೆಹನಿ, ಗಾಳಿಯಿಂದಾಗಿ ಕೊಚಪಚ ಎಂದ ಅವನ ಮಾತುಗಳು ಅಸ್ಪಷ್ಟವಾಗಿ ಕೇಳಿದವು. ನಖಶಿಖಾಂತ ತೋಯ್ದು, ನೀರಲ್ಲಿ ಮುಳುಗೆದ್ದ ಸ್ಥಿತಿಯಲ್ಲಿದ್ದ ಅವರಿಬ್ಬರಿಗೂ ಆ ಬೆಂಕಿಯ ಅಸ್ಪಷ್ಟ ಕುರುಹು ಚೈತನ್ಯವನ್ನು ಹುಟ್ಟಿಸಿತು. ಅನಂತರ ಸುಮಾರು ದೂರ ಆ ಹುದುಗಿನಲ್ಲೇ ನಡೆದು ಗುಡ್ಡದ ಬುಡವೊಂದಕ್ಕೆ ಬಂದು ತಲುಪಿದರು.

ಅಷ್ಟರಲ್ಲಾಗಲೇ ಮುಂದೆ ಒಂದು ಮಾರು ಕೂಡ ಕಾಣದಷ್ಟು ಕತ್ತಲು ಆವರಿಸಿಕೊಂಡಿತ್ತು. ಆ ಕತ್ತಲಲ್ಲೂ ಎದುರಿಗಿದ್ದ ಪರ್ವತಗಳು ಮತ್ತಷ್ಟು ಎತ್ತರವಾಗಿ, ಬೃಹದಾಕಾರವಾಗಿ ಗೋಚರಿಸುತ್ತಿದ್ದವು. ಮೊದಲು ಕಂಡಿದ್ದ ಬೆಂಕಿಯ ಕುರುಹು ಈಗ ಕಾಣುತ್ತಿರಲಿಲ್ಲ. ಆ ವ್ಯಕ್ತಿ ಒಂದೆಡೆ ನಿಂತವನೇ ಏಕಾಏಕಿ, 'ಕುಹೂಹೂ' ಎಂದು ಕೂಗು ಹಾಕಿದ. ಪಕ್ಕದಲ್ಲಿದ್ದ ಇಬ್ಬರನ್ನೂ ಏಕಾಏಕಿ ಬೆಚ್ಚಿಬೀಳಿಸಿದ ಆ ಕೂಗು ಮಳೆ, ಗಾಳಿಯ ಸದ್ದಿನ ನಡುವೆಯೂ ಅನುರಣಿಸಿತು. ಸ್ವಲ್ಪ ತಡೆದು ಮತ್ತೆ ಅದೇ ತೆರನಾದ ಕೂಗು ಹಾಕಿದ. ಅದಾದ ಕ್ಷಣದಲ್ಲೇ ಗುಡ್ಡದ ಮೇಲು ಭಾಗದಿಂದ ಅದೇ ಧಾಟಿಯ ಕೂಗು ಕೇಳಿಸಿತು. ಆ ವ್ಯಕ್ತಿ ಅದನ್ನು ಕೇಳಿದ್ದೇ ಏನನ್ನೋ ಲೊಚಗುಟ್ಟಿದ. ಅದೇನೆಂದು ಇವರಿಗೆ ಅರ್ಥವಾಗಲಿಲ್ಲ. ಈ ಬಾರಿ ಮತ್ತೊಂದು ಬಗೆಯಲ್ಲಿ ಕೂಗು ಮೊಳಗಿಸುತ್ತಿರುವಂತೆಯೇ ಗುಡ್ಡದ ಇಳಿಜಾರಿನ ದಟ್ಟ ಕಾಡಿನ ನಡುವೆ ಬೆಂಕಿ ಹೊತ್ತಿಸಿದ ದೊಂದಿಯ ಕ್ಷೀಣ ಜ್ವಾಲೆಯ, ಬಾಣದಂತೆ ನುಗ್ಗಿ ಬರುವ ಟಾರ್ಚಿನ ಬೆಳಕು ನಿಧಾನಕ್ಕೆ ತಮ್ಮ ಕಡೆಗೆ ಬರುತ್ತಿರುವುದನ್ನು ಗಮನಿಸಿದರು.

ದೊಂದಿಯನ್ನು ತಲೆ ಮೇಲಕ್ಕೆ ಹಿಡಿದು ಹತ್ತಿರ ಬಂದ ವ್ಯಕ್ತಿಯ ಮುಖ ಸಂತೋಷ, ಮನೀಷರಿಗೆ ಗೋಚರಿಸಲಿಲ್ಲ. ಇವರ ಜೊತೆಗಿದ್ದ ವ್ಯಕ್ತಿ ಗಟ್ಟಿಧ್ವನಿಯಲ್ಲಿ ಏನೋ ಕೂಗಿ ಹೇಳಿದ. ಟಾರ್ಚ್ ಬಿಡುತ್ತಲೇ ಹತ್ತಿರ ಬಂದ ವ್ಯಕ್ತಿ ಇವರು ನಿಂತ ಜಾಗದ ಸುತ್ತಲೂ ಬೆಳಕು ಬೀರಿತು.

ಆಗ ಸಂತೋಷನಿಗೆ ನೆನಪಿಗೆ ಬಂತು. 'ನಮ್ಮ ಮತ್ತು ಅವರ ನಡುವೆ ರಭಸದಿಂದ ಹರಿಯುತ್ತಿರುವ ನೀರಿನ ಹಳ್ಳವಿದೆ. ಅದರಾಚೆ ಅವರಿದ್ದಾರೆ' ಅಂತ. ಟಾರ್ಚಿನ ಬೆಳಕು ಆ ಹಳ್ಳದ ಕೆಳಭಾಗದ ಒಂದಷ್ಟು ಭಾಗವನ್ನು ಶೋಧಿಸಿದಾಗ ಸ್ವಲ್ಪವೇ ಕೆಳಗೆ ಹಳ್ಳವನ್ನು ದಾಟುವ ಉದ್ದದ ಮರದ ತುಂಡುಗಳನ್ನು ಹಾಸಿದ ಸಂಕ ಗೋಚರಿಸಿತು. ಈ ಕಡೆಯ ಅದೃಶ್ಯ ರೂಪಿ ಅದೇನೋ ಕೂಗಿತು. ಆ ಕಡೆಯ ಆಕೃತಿ ಅದಕ್ಕೆ ಉತ್ತರಿಸಿತು. ದೊಂದಿ, ಟಾರ್ಚಿನ ಬೆಳಕಿನಲ್ಲಿ ಕೆಳಭಾಗಕ್ಕೆ ಹೋಗಿ, ಆ ಮರದ ಸಂಕ ದಾಟಿ ಬಂದ ಮೊಣಕಾಲು ತನಕ ಕಚ್ಚೆಪಂಚೆ, ಮೈಮೇಲೆ ತೆಳ್ಳನೆಯ ತೋಳಿಲ್ಲದ ಬನಿಯನ್ ತೊಟ್ಟ ವ್ಯಕ್ತಿ ತನ್ನ ಕೈಯಲ್ಲಿದ್ದ ಬೆಂಕಿ ಸೂಡಿಯನ್ನು ತಮ್ಮ ಜೊತೆ ಬಂದ ವ್ಯಕ್ತಿಗೆ ಕೊಟ್ಟು ಅದೇನನ್ನೋ ಹೇಳಿದರು. ಆತ ಆ ಸೂಡಿ ಹಿಡಿದು ಮುಂದಿನ ಕತ್ತಲೆಯಲ್ಲಿ ಗರಗರ ತಿರುಗಿಸಿ, ಬೆಳಕು ಮಾಡಿಕೊಳ್ಳುತ್ತ ಮುಂದಕ್ಕೆ ಹೋದ. ಅವನು ಹೋದತ್ತಲೇ ನೋಡುತ್ತ ಗಲಿಬಿಲಿಯಲ್ಲಿದ್ದ ಸಂತೋಷ, ಮನೀಷರ ಸಮೀಪ ಆ ವ್ಯಕ್ತಿ ಬಂದು ಮೈ ತಟ್ಟಿ, 'ನನ್ನ ಹೆಸರು ಮೂರ್ತಿರಾಯ. ಸದ್ಯಕ್ಕೆ ಚುಟುಕಾಗಿಯೇ ಹೇಳಿದ್ದೀನಿ, ಭಯ ಬೇಡ, ಬನ್ನಿ' ಎಂದ.

ಒಂದು ಭಯಾನಕ ದುಃಸ್ವಪ್ನವನ್ನು ಕಂಡು ಕಂಗಾಲಾದವರಂತಿದ್ದ ಇಬ್ಬರೂ ಈಗ ಭರವಸೆ ಮೂಡಿಸುವ ಜಗತ್ತಿನ ಅಂಚಿನಲ್ಲಿದ್ದರು. ಮೂರ್ತಿರಾಯರು ಆ ಸಂಕ ದಾಟಿಸಿ, ಏರುದಾರಿಯ ಗುಡ್ಡ ಹತ್ತಿಸಿ, ಅರ್ಧ ಗುಡ್ಡದಲ್ಲಿ ಸಮತಟ್ಟು ಮಾಡಿದ ಜಾಗದಲ್ಲಿನ ಚಿಕ್ಕಮನೆಯೊಂದಕ್ಕೆ ಕರೆತಂದು, ಅಂಗಳದಲ್ಲಿ ಹಂಚಿನ ಮಾಡಿನ ಕೆಳಗೆ ಉರಿಯುತ್ತಿದ್ದ ಬೆಂಕಿಯ ತುಸು ದೂರದಲ್ಲಿ ಗೋಣಿಚೀಲ ಹಾಸಿ ಕೂರಿಸಿದ್ದರು.

'ನೀವು ನಿಮ್ಮ ಬಟ್ಟೆಗಳನ್ನು ಕಳಚಿ. ಮೈಗೆ ಉಂಬಳಗಳು ಹತ್ತಿರಬಹುದು. ನಿಧಾನಕ್ಕೆ ಅವನ್ನೆಲ್ಲ ಕಿತ್ತು ಈ ಬೆಂಕಿಗೆ ಎಸೆಯಿರಿ. ಅಷ್ಟರಲ್ಲಿ ನಾನು ನಿಮಗೇನಾದರೂ ಬಾಯಾರಿಕೆಗೆ ತರುತ್ತೇನೆ. ಕಾಳುಮೆಣಸಿನ ಕಷಾಯ ಆಗಬಹುದೋ? ಕಾಫಿಯೇ ಬೇಕೋ?' ಎನ್ನುತ್ತ ಇಬ್ಬರಿಗೂ ಪಂಚೆಯ